# ಕಾಫಿ ಲಹರಿ

■ ಸುಮಾವೀಣಾ

**ಲವಲವಿಕೆಗೆ ಇನ್ನೊಂದು ಹೆಸರೇ ಕಾಫಿ! ದೇಹಕ್ಕಿರಲಿ, ಮನಸ್ಸಿಗಿರಲಿ ಆಯಾಸ ನೀಗಿಕೊಳ್ಳಲು ಒಂದು ಕಪ್ ಕಾಫಿ ಹೀರಿದರೆ ಸಾಕು, ಚೈತನ್ಯ ಮರಳಿಬಂದಂತೆ. ಚುಮು ಚುಮು ಚಳಿಯಲ್ಲಿ ಬೆಚ್ಚಗಿನ ಕಾಫಿ ಕುಡಿಯುವ ಸುಖಕ್ಕೆ ಬೇರೆ ಎಣೆಯುಂಟೇ?**



**ಬಿಸಿ ಕಾಫಿಯ ನೆನೆದರೆ ಕಂಪನ**
**ತಂತಾನೆ ಮನದಲ್ಲಿ ನರ್ತನ...**

ಕೊರೆಯುವ ಮೈಚಳಿ ಬಿಡಿಸಲು ಸುಖೋಷ್ಣ ಸ್ಥಿತಿಯಲ್ಲಿರುವ, ಹಿತವಾದ ಪರಿಮಳ ಬೀರುವ ಕಾಫಿ ಬೇಕೇಬೇಕು! ಒರಗಲು ಸಲೀಸಾದ ಒಂದು ಆರಾಮ ಕುರ್ಚಿ, ಸುಶ್ರಾವ್ಯ ಹಿನ್ನೆಲೆ ಸಂಗೀತ, ಪರಿಮಳಭರಿತ ಕಾಫಿ ಜೊತೆ ಸುದ್ದಿಪತ್ರಿಕೆಯಿರುವ ಬೆಳಗು ನಿಜ ಅರ್ಥದಲ್ಲಿ ಸ್ವರ್ಗವೇ ಅಲ್ಲವೇ?

ತನ್ನ ಪರಿಮಳ, ಬಣ್ಣದಿಂದಲೇ ಫೇಮಸ್ ಈ ಕಾಫಿ. ಹಾಗಾಗಿಯೇ ಕಡುಕಂದು ಬಣ್ಣವನ್ನು 'ಕಾಫಿಕಲರ್' ಅಥವಾ 'ಕಾಫಿಬ್ರೌನ್' ಎಂದು ಕರೆಯುವುದು. ಯುಗಾದಿ ಕಳೆದ ನಂತರ ಬರುವ ಮಳೆಯಿಂದ ಕಾಫಿ ಹೂ ಅರಳುತ್ತದೆ, ಆ ಪರಿಮಳವೇ ಚೇತೋಹಾರಿ. ಕಾಫಿ ಹೂ, ಕಾಫಿ ಹಣ್ಣು, ಕಾಫಿ ಕೊಯ್ಲು, ಕಾಫಿ ಕಣ, ಕಾಫಿ ಪಲ್ಪ್, ಕಾಫಿ ಬೀಜ, ಕಾಫಿ ಬೇಳೆ, ರೊಬೊಸ್ಟ, ಪಾರ್ಚ್ಮೆಂಟ್, ಚೆರ್ರಿ, ಕಾಫಿ ಪ್ಲಾಂಟರ್, ಕಾಫಿ ಪ್ಲಾಂಟೇಶನ್, ಕಾಫಿ ಬೋರ್ಡ್, ಎಸ್ಟೇಟ್ ಮ್ಯಾನೇಜರ್, ಕಾಫಿ ಕ್ಯೂರಿಂಗ್ ಈ ಪದಗಳನ್ನೇ ಕೇಳಿ ಬೆಳೆದ ಮಲೆನಾಡಿನ ಕಾಫಿ ಮಂದಿ ನಾವು.

ನಮ್ಮಜ್ಜಿ, ನಮ್ಮಮ್ಮ, ನಾನು, ನನ್ನ ತಮ್ಮಂದಿರು ಎಲ್ಲರೂ ಕಾಫಿಪ್ರಿಯರೇ. ಕಾಫಿಯಲ್ಲೂ ಆರೋಗ್ಯ ಕಂಡುಕೊಂಡವರು ನಾವು. ಆದರೆ ಚಟವಾಗಿಸಿಕೊಂಡವರಲ್ಲ. ನನ್ನ ಪ್ರಕಾರ ಕಾಫಿ ಒಂದು 'ಕಂಫರ್ಟ್!'. ಹೆಚ್ಚು ಮಾತನಾಡುವವರು, ಹಾಡುಗಾರರು, ಪದೇ ಪದೇ ಕಾಫಿ ಕುಡಿಯುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ. ಏರುಧ್ವನಿಯಲ್ಲಿ ಮಾತನಾಡಿ ಆಯಾಸವಾದ ಗಂಟಲಿಗೆ ಬಿಸಿ ಕಾಫಿಯೇ ಆರೈಕೆ.

ಯಾರಾದರೂ ಮಾತಿಗೆ ಸಿಕ್ಕರೆ 'ಕಾಫಿ ಆಯಿತಾ?', 'ಸಂಜೆ ಕಾಫಿಗೆ ಏನು?' ಎನ್ನುತ್ತಾರೆಯೇ ವಿನಃ 'ಟೀ ಆಯಿತಾ' ಎನ್ನುವುದಿಲ್ಲ. ಕ್ಯಾರೆಟ್–ಬಿಟ್ರೂಟ್, ಜಹಾಂಗಿರ್–ಜಿಲೇಬಿ ಅನ್ನುವಂತೆ ಟೀ ಹೆಸರು ಕೂಡ ಕಾಫಿ ಜೊತೆ ಕೇಳಿಬರುತ್ತದಷ್ಟೆ. ಮನೆಗೆ ಬಂದ ಅತಿಥಿಗಳಿಗೆ ಸತ್ಕಾರ ಮಾಡುವಾಗ 'ಏನ್ ಮಾಡ್ಲಿ ಕಾಫಿನೋ ಟೀನೋ' ಅನ್ನುತ್ತಾರೆ. ನಿಜವಾಗಿ ಸತ್ಕಾರ ಮಾಡುವವರು, ಅತಿಥಿಗಳು ಬಾಯ್ಬಿಡುವ ಮೊದಲೇ ಕಾಫಿ ತಂದು ಇಟ್ಟೂ ಬಿಡುತ್ತಾರೆ.

ಕಾಫಿ ಕಪ್‌ಗಳಲ್ಲೂ ಎಷ್ಟು ವಿಧ! ಸ್ಟೀಲ್, ಹಿತ್ತಾಳೆ, ಬೆಳ್ಳಿ, ಪಿಂಗಾಣಿ ಕಪ್ ಸಾಸರ್, ಗಾಜಿನ ಲೋಟ, ಬಾಂಬೆ ಕಪ್, ಪೇಪರ್ ಗ್ಲಾಸ್, ಪ್ಲಾಸ್ಟಿಕ್ ಗ್ಲಾಸ್ ಇತ್ಯಾದಿ ಇತ್ಯಾದಿ... ಬೈಟು ಕಾಫಿ, ಬೈತ್ರಿಕಾಫಿ ಪದಗಳನ್ನು ಮಲೆನಾಡು ಬಿಟ್ಟ ಮೇಲೇ ನಾನು ಪರಿಚಯಿಸಿಕೊಂಡದ್ದು.

ಮನುಷ್ಯನ ಆಲೋಚನಾ ರೀತಿಯನ್ನು, ಅನುಭವಿಸುವ ಪರಿಯನ್ನು, ಅವರ ಮನಸ್ಥಿತಿಯನ್ನು ಅವರವರು ಕಾಫಿ ಕಪ್ ಹಿಡಿಯುವ ಬಗೆ, ಅದನ್ನು ಸೇವಿಸುವ ಬಗೆಯಲ್ಲೇ ಕಂಡುಕೊಳ್ಳಬಹುದಂತೆ. ಕುಡಿದು